ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

(ನಿಯಮ 60ರ ಅಡಿಯಲ್ಲಿ)

ವಿಷಯ: ಲೋಕಾಯುಕ್ತರನ್ನು ನೇಮಕ ಮಾಡುವ ವಿಷಯದಲ್ಲಿ ಸರ್ಕಾರ ಉದ್ದೇಶಪೂರ್ವಕವಾಗಿ ವಿಳಂಬ ಧೋರಣೆಯನ್ನು ಅನುಸರಿಸುತ್ತಿರುವುದು ಮತ್ತು ಲೋಕಾಯುಕ್ತ ವ್ಯವಸ್ಥೆಯನ್ನು ನಿಷ್ಪ್ರಯೋಜಕಗೊಳಿಸುವ ಬಗ್ಗೆ:

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸಿಪುರ): ಮಾನ್ಯ ಅಧ್ಯಕ್ಷರೇ, ನಾನು ನಿಯಮ 60ರ ಅಡಿಯಲ್ಲಿ ರಾಜ್ಯದಲ್ಲಿ ಲೋಕಾಯುಕ್ತರನ್ನು ನೇಮಕ ಮಾಡುವ ವಿಷಯದಲ್ಲಿ ಸರ್ಕಾರ ಉದ್ದೇಶಪೂರ್ವಕವಾಗಿ ವಿಳಂಬ ಧೋರಣೆಯನ್ನು ಅನುಸರಿಸುತ್ತಿರುವುದು ಮತ್ತು ಲೋಕಾಯುಕ್ತ ವ್ಯವಸ್ಥೆಯನ್ನು ನಿಷ್ಪ್ರಯೋಜಕಗೊಳಿಸುವುದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಏಕೆಂದರೆ, ಕಳೆದ 6 ತಿಂಗಳಿನಿಂದ ಈ ರಾಜ್ಯದಲ್ಲಿ ಲೋಕಾಯುಕ್ತ ಸಂಸ್ಥೆಯೇ ಇಲ್ಲದಂತಾಗಿದೆ. ಏಕೆಂದರೆ, ಲೋಕಾಯುಕ್ತ ಆಕ್ಟ್ ಪ್ರಕಾರ ಉಪ ಲೋಕಾಯುಕ್ತರು ಲೋಕಾಯುಕ್ತರ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಕಳೆದ 6 ತಿಂಗಳಿನಿಂದ ಯಾರೇ ಅರ್ಜಿ ಕೊಟ್ಟರೂ ಆ ಎಲ್ಲಾ ಕಡತಗಳು ಲೋಕಾಯುಕ್ತ ಮುಂದೆ ಬಿದ್ದುಹೋಗಿವೆ. ಲೋಕಾಯುಕ್ತ ಕಛೇರಿ ಬಾಗಿಲು ಹಾಕಿದೆ ಎಂದರೆ ತಪ್ಪಾಗಲಾರದು. ಉಪ ಲೋಕಾಯುಕ್ತರ ಹತ್ತಿರ ನಾನೇ ಯಾವುದೇ ಒಂದು ವಿಷಯವನ್ನು ಕೇಳುವುದಕ್ಕೆ ಹೋದಾಗ ಅವರು ಹೇಳಿದರು. ಲೋಕಾಯುಕ್ತರು ಮಾಡಿರುವ ಯಾವುದೇ ಆದೇಶವನ್ನು ನಾನು ಏನು ಮಾಡುವುದಕ್ಕಾಗುವುದಿಲ್ಲವೆನ್ನುವ ಭಾವನೆಯನ್ನು ವ್ಯಕ್ತಪಡಿಸಿದರು. ಸರ್ಕಾರಕ್ಕೆ ಲೋಕಾಯುಕ್ತರನ್ನು ನೇಮಕ ಮಾಡದೇ ಇರುವುದಕ್ಕೆ ಏನು ಕಾರಣ ಸ್ವಾಮಿ. ಇದರ ಬಗ್ಗೆ ನಾನು ಡಿಟೇಲಾಗಿ ಚರ್ಚೆ ಮಾಡುವುದಕ್ಕೆ ಮತ್ತು ಇವತ್ತು ಪತ್ರಿಕೆಗಳಲ್ಲಿ ಆ ಸಂಸ್ಥೆಯನ್ನು ಮುಚ್ಚಬೇಕು ಎನ್ನುವ ಒಂದು ಲೆವಲ್‌ನಲ್ಲಿ ವಿವಿಧ ಪಕ್ಷಗಳು ಮಾತನಾಡುತ್ತಿರುವುದನ್ನು ತಾವು ನೋಡುತ್ತಿದ್ದೀರಿ. ಒಂದು ಕಡೆ ನಿವೃತ್ತ ಚೀಫ್ ಜಸ್ಟೀಸ್, ನ್ಯಾಯಮೂರ್ತಿ, ಬನ್ನೂರಮಠರವರ ಹೆಸರನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸುತ್ತಾರೆ. "ರಾಜ್ಯಪಾಲರಿಗೆ ಏನು ರೋಗ" ಎಂದು ಆಡಳಿತ ಪಕ್ಷದ ಅಧ್ಯಕ್ಷರೆ ಹೇಳುತ್ತಾರೆ, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಿಯಮ 60ರ ಅಡಿಯಲ್ಲಿಯೇ ಕೊಡಬೇಕಾಗುತ್ತದೆ. ರಾಜ್ಯದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಬೇಕು ಎನ್ನುವುದು ಈ ಸರ್ಕಾರದ ಒಂದು ದೃಢ ನಿಲುವು ಎನ್ನುತ್ತಾರೆ. ಇವತ್ತು ದೇಶದಲ್ಲಿಯೇ ಒಂದು ಹೋರಾಟ ನಡೆಯುತ್ತಿದೆ. ಅದರಲ್ಲಿಯೂ

ಮಾನ್ಯ ಎಲ್.ಕೆ. ಆದ್ವಾನಿಯವರು ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿ ಪ್ರವಾಸ ಮಾಡಿ ಬಂದಿದ್ದಾರೆ. ಆದರೆ ಇವತ್ತು ಅವರದ್ದೇ ಪಕ್ಷದ ಆಡಳಿತ ಇರುವ ರಾಜ್ಯದಲ್ಲಿ ಒಂದು ಲೋಕಾಯುಕ್ತ ಸಂಸ್ಥೆ 6 ತಿಂಗಳಿನಿಂದ ನಡೆಯುತ್ತಿಲ್ಲವೆಂದರೆ ಅರ್ಥವೇನು? ಆ ಉದ್ದೇಶಕ್ಕೋಸ್ಕರ ನಿಯಮ 60ರಲ್ಲಿಯೇ ಚರ್ಚೆಗೆ ಅವಕಾಶ ಕೊಡಬೇಕಾಗುತ್ತದೆ. ಇವತ್ತು ಆ ಸಂಸ್ಥೆಯನ್ನು ಮುಚ್ಚಬೇಕೆನ್ನುವುದರ ಬಗ್ಗೆ ಈ ಸರ್ಕಾರಕ್ಕೆನಾದರೂ ಒಂದು ಹುನ್ನಾರ ಇದೆಯೇ ಎನ್ನುವುದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಲೋಕಾಯುಕ್ತರನ್ನು ನೇಮಕ ಮಾಡುವುದರ ವಿಷಯದಲ್ಲಿ ಸರ್ಕಾರವು ಉದ್ದೇಶಪೂರ್ವಕ ವಿಳಂಬ ಧೋರಣೆಯನ್ನು ಅನುಸರಿಸುತ್ತಿದೆ ಎನ್ನುವ ಒಂದು ಮಾತನ್ನು ಈ ನಿಲುವಳಿ ಸೂಚನೆಯಲ್ಲಿ ತಿಳಿಸಿದ್ದಾರೆ. ನಮಗೂ ಕೂಡ ಇದು ಚರ್ಚೆಯಾಗಬೇಕು. ಉದ್ದೇಶಪೂರ್ವಕವಾಗಿ ವಿಳಂಬ ಧೋರಣೆಯನ್ನು ಅನುಸರಿಸುತ್ತಿದ್ದಾರೆ, ಅದು ಯಾರು ಎನ್ನುವುದು ಕೂಡ ರಾಜ್ಯಕ್ಕೆ ಗೊತ್ತಾಗಬೇಕು. ಅದು ಚರ್ಚೆಯಾಗಲಿ, ಆದರೆ ಇದನ್ನು ದಯವಿಟ್ಟು ನಿಲುವಳಿ ಸೂಚನೆ ಮೂಲಕ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಇದೊಂದು ಆಡಳಿತಾತ್ಮಕವಾದ ವಿಚಾರ. ಇದಕ್ಕೆ ಮಾನ್ಯ ಸಭಾಧ್ಯಕ್ಷರು ಅವಕಾಶ ಕೊಡುವುದಾದರೆ, ಬೇರೆ ಸ್ವರೂಪದಲ್ಲಿ ಕೊಡಿ, ನಾವು ಕೂಡ ಸರ್ಕಾರದಿಂದ ಬಹಳ ವಿವರವಾಗಿ ಉತ್ತರವನ್ನು ಕೊಡುತ್ತೇವೆ.

ಅಧ್ಯಕ್ಷರು: ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರನ್ನು ನಾನು ಮನವಿ ಮಾಡುತ್ತೇನೆ. ಇದಕ್ಕಿಂತ ಇನ್ನೇನು ಬೇಕು, ರಾಜ್ಯದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವಂಥದ್ದರ ಬಗ್ಗೆ, ಈ ನಿಲುವಳಿ ಸೂಚನೆ ಮೇಲೆ ಮಾತನಾಡುವುದಕ್ಕೆ ಆಗುವುದಿಲ್ಲ. ಬೇರೆ ರೂಪದಲ್ಲಿ ತನ್ನಿ ಎನ್ನುವುದಾದರೆ ಅಲ್ಲಿಗೆ ಸರ್ಕಾರದ ಲೆಕ್ಕಾಚಾರ ಏನು ಎನ್ನುವುದು ಗೊತ್ತಾಗಬೇಕು. ಲೋಕಾಯುಕ್ತರನ್ನು ನೇಮಕ ಮಾಡದೆ 6 ತಿಂಗಳಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್: ಇದು ಸರ್ಕಾರದ ಆಡಳಿತಾತ್ಮಕವಾದ ಪ್ರಶ್ನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಇವತ್ತು ಇಡೀ ದೇಶದಲ್ಲಿ ಭ್ರಷ್ಟಾಚಾರವನ್ನು ನಿಯಂತ್ರಣ ಮಾಡಬೇಕೆಂದು ಹೇಳಿ ಅವರ ರಾಷ್ಟ್ರೀಯ ಮುಖಂಡರು ಹೊರಟ್ಟಿದ್ದಾರೆ.

ಶ್ರೀ ಬಂಡೆಪ್ಪ ಕಾಶಂಪೂರ್: ಮಾನ್ಯ ಅಧ್ಯಕ್ಷರೆ, ಸುಮಾರು ಜನ ಮಾನ್ಯ ಸಚಿವರ

ಮೇಲೆ FIR ಬುಕ್ ಆಗಿದ್ದು, ಇದೊಂದು ಬಹಳ ಗಂಭೀರವಾದ ವಿಚಾರವಾಗಿದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಇದೊಂದೆ ವಿಷಯವನ್ನು ತೆಗೆದುಕೊಂಡು ಬೇರೆ ವಿಷಯವನ್ನು ಇವತ್ತು ತೆಗೆದುಹಾಕಿ.

(ಗೊಂದಲ)

ಶ್ರೀ ಕೆ.ಎನ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಲೋಕಾಯುಕ್ತರ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಸಭಾಧ್ಯಕ್ಷರು ಅವಕಾಶವನ್ನು ಕೊಟ್ಟರೆ ಮಾಡಿ. ಇಲ್ಲಿ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ನಾಯಕರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಿಮಗೆ ಏನೂ ಅಧಿಕಾರವಿಲ್ಲ. ಏಕೆಂದರೆ, ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ನಾಯಕರು ಲೋಕಾಯುಕ್ತರು ಇರಬೇಕೆಂದು ಹೇಳಿ, ಲೋಕಾಯುಕ್ತರ ಮನೆಗೂ ಹೋಗಿ ಪೋನಿನಲ್ಲಿ ಹೇಳಿದ್ದು, ಲೋಕಾಯುಕ್ತರ ಬಗ್ಗೆ ಗೌರವ ಇರುವಂಥ ಬಿಜೆಪಿ ಪಾರ್ಟಿ, ಲೋಕಾಯುಕ್ತರ ಬಗ್ಗೆ ಪ್ರಸ್ತಾಪ ಮಾಡುತ್ತಿರುವಂಥ ರಾಜ್ಯಪಾಲರ ಬಗ್ಗೆ ಯಾವ ಭಾಷೆಯಲ್ಲಿ ಹೇಳಬೇಕೆನ್ನುವುದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು: ರಾಜ್ಯಪಾಲರ ಬಗ್ಗೆ ಇಲ್ಲಿ ಚರ್ಚೆ ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಏಕೆ ರಾಜ್ಯಪಾಲರ ಬಗ್ಗೆ ಹೇಳಿದೆ ಎಂದರೆ, ಲೋಕಾಯುಕ್ತರ ಬಗ್ಗೆ ಭಾರತೀಯ ಜನತಾ ಪಾರ್ಟಿಯ ನಾಯಕರು ಹೇಗೆ ನಡೆದುಕೊಳ್ಳುತ್ತಿದ್ದಾರೆ ಎನ್ನುವ ಬಗ್ಗೆ ಮಾತನಾಡಿ, ರಾಜ್ಯಪಾಲರು ಯಾರ [***] ಅದನ್ನು ಬಿಟ್ಟು ನೀವು ರಾಷ್ಟ್ರೀಯ ನಾಯಕರ ಬಗ್ಗೆ ಮಾತನಾಡುತ್ತೀರಿ. ಭ್ರಷ್ಟಾಚಾರ ಹೋಗಬೇಕು ಎನ್ನುವ ಒಂದೇ ಕಾರಣಕ್ಕೆ ಇವತ್ತು ದೇಶದಲ್ಲಿ, ರಾಜ್ಯದಲ್ಲಿ ಲೋಕಾಯುಕ್ತರ ಬಗ್ಗೆ ಪ್ರಸ್ತಾಪ ಮಾಡುತ್ತಿರುವುದು ಲೋಕಾಯುಕ್ತರ ಬಗ್ಗೆ ನಮಗೆ ಗೌರವ ಇರುವುದು [***].

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, [***] ಎನ್ನುವ ಪದವನ್ನು ಕಡತದಿಂದ ಅಧ್ಯಕ್ಷರು: ಆ ಪದವನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು: ರಾಜ್ಯಪಾಲರ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶ ಕೊಡುವುದಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ರಾಜ್ಯಪಾಲರು ಸಂವಿಧಾನದ ಪ್ರಕಾರ.....

---

* ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು: ಇದು ಯಾವುದು ದಾಖಲೆಗೆ ಹೋಗಬಾರದು. ಇಲ್ಲಿ ಯಾರು ಏನು ಮಾತನಾಡಿದರೂ ದಾಖಲೆಗೆ ಹೋಗುವುದಿಲ್ಲ.

(ಈ ಹಂತದಲ್ಲಿ ಜೆಡಿ(ಎಸ್) ಪಕ್ಷದ ಉಪನಾಯಕರಾದ ಶ್ರೀ ಬಂಡೆಪ್ಪ ಕಾಶೆಂಪೂರ ಮತ್ತು ಶ್ರೀ ಸಿ.ಎಸ್. ಪುಟ್ಟೇಗೌಡರು ಸದನದ ಬಾವಿಗೆ ಬಂದು ಧರಣಿ ಮಾಡಿದರು)

(ಗೊಂದಲ)

ಅಧ್ಯಕ್ಷರು: ನಾನು ಪ್ರಸ್ತಾಪ ಮಾಡುವುದಕ್ಕೆ ಮುಂಚೆಯೇ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇಲ್ಲಿ ಯಾವುದೂ ಕಡತಕ್ಕೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ನಾನು ಇನ್ನೂ ಎನೂ ತೀರ್ಮಾನ ಕೊಡದೇ ನೀವು ಏಕೆ ಧರಣಿಗೆ ಬಂದಿದ್ದೀರಿ? ತಾವು ಹೇಳಿದ [***] ಎನ್ನುವ ಪದವನ್ನು ಕಡತದಿಂದ ತೆಗೆಯುವಂತೆ ಹೇಳಿದ್ದೇನೆ. ಯಾರು ಮಾತನಾಡಿದರೂ ದಾಖಲೆಗೆ ಹೋಗುವುದಿಲ್ಲವೆಂದು ಹೇಳಿದ್ದೇನೆ.

(ಈ ಹಂತದಲ್ಲಿ ಜೆಡಿ(ಎಸ್) ಪಕ್ಷದ ಸದಸ್ಯರು ಸದನದ ಬಾವಿಯಿಂದ ನಿರ್ಗಮಿಸಿದರು)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಈಶ್ವರಪ್ಪನವರು [***] ಎಂದು ಹೇಳಿದ್ದಾರೆ.

ಅಧ್ಯಕ್ಷರು: ಅದನ್ನು ಕಡತದಿಂದ ತೆಗೆದಿರುತ್ತೇನೆ.

ಶ್ರೀ ಸಿದ್ದರಾಮಯ್ಯ: ಆ ತರಹ ಹೇಳುವ ಮಾತು ಯಾರಿಗೂ ಗೌರವ ತರತಕ್ಕಂಥ ಮಾತು ಅಲ್ಲ. [***] ಅವರು ಸಂವಿಧಾನದ ಪರವಾಗಿ ಕೆಲಸ ಮಾಡುವವರು. ನಿಮ್ಮ ಪಕ್ಷದಿಂದ ಅಧಿಕಾರ ಮಾಡತಕ್ಕಂಥ ರಾಜ್ಯಗಳಲ್ಲಿಯೂ ಕೂಡ ರಾಜ್ಯಪಾಲರುಗಳು ಇದ್ದಾರೆ. ಹಾಗೆಂದು [***] ಎಂದು ಹೇಳುವುದಕ್ಕಾಗುವುದಿಲ್ಲ. ನಿಮ್ಮ ಕಾಲದಲ್ಲಿಯೂ appointment ಆಗಿರುವಂಥ Governor ಗಳು ಇರುತ್ತಾರೆ. [***] ದಯವಿಟ್ಟು ವಿಷಯಾಂತರ ಮಾಡುವುದು ಬೇಡ. ರಾಜ್ಯಪಾಲರ ವಿಷಯವನ್ನು ಇಲ್ಲಿ ತೆಗೆದುಕೊಂಡು ಬಂದು ಚರ್ಚೆ ಮಾಡುವುದು ಏನಿದೆ.....

* ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

[***] ಎನ್ನುವ ಪದವನ್ನು ಕಡತದಿಂದ ತೆಗೆಯಬೇಕು. ನಮಗೂ ಮತ್ತು ನಿಮಗೂ ಶೋಭೆ ತರುವುದಿಲ್ಲ.

ಅಧ್ಯಕ್ಷರು: ಆ ಪದವನ್ನು ಕಡತದಿಂದ ತೆಗೆದಿರುತ್ತೇನೆ.

ಶ್ರೀ ಸಿದ್ದರಾಮಯ್ಯ: ಆ ತರಹ ಮಾತನಾಡಬಾರದು.

ಶ್ರೀ ಕೆ.ಎಸ್. ಈಶ್ವರಪ್ಪ: ನಿಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ತಾವು ಒಂದು ನಿಮಿಷ ದಯವಿಟ್ಟು ಕೇಳಿ. ಲೋಕಾಯುಕ್ತರ ನೇಮಕದ ಬಗ್ಗೆ ಹಿಂದಿನ ಸರ್ಕಾರಗಳು, ಹೆಸರುಗಳನ್ನು ಕಳುಹಿಸಿದ್ದೀರಿ. ಅವರು ಆಗ ವಿರೋಧ ಪಕ್ಷದವರ ಜೊತೆ ಎಷ್ಟರ ಮಟ್ಟಿಗೆ ಸಂಪರ್ಕ ಮಾಡಿದರು. ಅವರ ಅಭಿಪ್ರಾಯಗಳನ್ನು ಎಷ್ಟರ ಮಟ್ಟಿಗೆ ಕೇಳಿದರು ಎನ್ನುವುದು ನಿಮಗೆ ಗೊತ್ತಿದೆ. ಆಗ ನೀವು ಯಾರೂ ಬೇಕಾಗಿರಲಿಲ್ಲ, ಆಗಿನ ರಾಜ್ಯಪಾಲರು ಅಪ್ರೂವಲ್ ಮಾಡಿ ಕೊಟ್ಟಿದ್ದಾರೆ. ನಾವು ಇಲ್ಲವೆಂದು ಹೇಳಿಲ್ಲ. ಈಗ ಸರ್ಕಾರ ಕಳುಹಿಸಿರುವ ಒಬ್ಬ ವ್ಯಕ್ತಿಯ ಹೆಸರನ್ನು ಈ ರಾಜ್ಯಪಾಲರು ತಡೆಯುವುದಕ್ಕೆ ಇವರ್ಯಾರು? ಇವರಿಗೆ ಅಧಿಕಾರವನ್ನು ಕೊಟ್ಟಿದ್ದು ಯಾರು? ಇವರು ನಿಮ್ಮ [***] ಅಲ್ಲವೇ?...

ಶ್ರೀ ಸಿದ್ದರಾಮಯ್ಯ: ಅವರಿಗೆ ಸಂವಿಧಾನದಲ್ಲಿ ಅಧಿಕಾರವನ್ನು ಕೊಟ್ಟಿರುವುದು.

ಶ್ರೀ ಸಿದ್ದರಾಮಯ್ಯ: ಇನ್ನೊಂದು ಸಾರಿ ನೀವು ಅದನ್ನು ಹೇಳುವುದಕ್ಕೆ ಲೋಕಾಯುಕ್ತ ಆಕ್ಟ್ ಅನ್ನು ಓದಿಕೊಳ್ಳಿ.

ಶ್ರೀ ಕೆ. ಎಸ್. ಈಶ್ವರಪ್ಪ: ಸ್ವಾಮಿ, ಆಕ್ಟ್ ಪ್ರಕಾರ ನಡೆದಿದ್ದರೆ ಚರ್ಚೆನೇ ಬರುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ: ಲೋಕಾಯುಕ್ತ ಆಕ್ಟ್‌ನಲ್ಲಿ ಅದನ್ನು ಅಪ್ರೂವ್ ಮಾಡಲು ಅವರಿಗೇ ಅಧಿಕಾರವಿರುವುದು. ಇವರ್ಯಾರು ಎಂದು ಕೇಳಿದರೆ ಇವರಿಗೆ ಏನೆಂದು ಹೇಳಬೇಕು ಹೇಳಿ?

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ: ಏಕೆ ಎಂದರೆ, ಮಾನ್ಯ ಸಿದ್ದರಾಮಯ್ಯನವರೆ ಕೇಳಿ

(ಗೊಂದಲ)

ಶ್ರೀ ಸಿದ್ದರಾಮಯ್ಯ: ಲೋಕಾಯುಕ್ತ ಆಕ್ಟ್ ನಲ್ಲಿ ಯಾರಿಗೆ ಅಪ್ರೂವಲ್ ಮಾಡಲು ಅಧಿಕಾರವಿದೆ? ನಿಮಗಾ, ಇವರಿಗಾ ಅಥವಾ ಇನ್ಯಾರಿಗೋ ಇದೆಯೇ?

---

* ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದುಹಾಕಲಾಗಿದೆ

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ್ಯ ಸಿದ್ದರಾಮಯ್ಯನವರೆ, ಒಂದು ನಿಮಿಷ ಕೇಳಿ

(ಗೊಂದಲ)

ಶ್ರೀ ಡಿ. ಎನ್. ಜೀವರಾಜ್: ಸರ್ಕಾರ ಕಳುಹಿಸಿರುವುದನ್ನು ರಾಜ್ಯಪಾಲರು ಒಪ್ಪಿಕೊಳ್ಳಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ: ಇಡೀ ಸದನ, ಇಡೀ ಕರ್ನಾಟಕ ರಾಜ್ಯದ ಜನ ಆರಿಸಿ ಕಳುಹಿಸಿದಂತಹ ಸದನ, ಪೂರ್ಣ ಬಹುಮತದಿಂದ ಎರಡು ಬಿಲ್ ಗಳನ್ನು ಪಾಸ್ ಮಾಡಿ ಕಳುಹಿಸಿದೆ. ಗೋಹತ್ಯೆ ನಿಷೇದದ ಬಗ್ಗೆ ಇರಬಹುದು ಅಥವಾ ಅಕ್ರಮ-ಸಕ್ರಮದ್ದು ಇರಬಹುದು. ಇವರು ಇಟ್ಟುಕೊಂಡು ಕುಳಿತಿದ್ದರಲ್ಲಾ. ಇಂತಹವರನ್ನು [*] ಎಂದು ಕರೆಯಬೇಕೋ ಅಥವಾ ಇನ್ನೇನು ಅಂತ ಕರೆಯಬೇಕು.

ಅಧ್ಯಕ್ಷರು: ಅದು ಕಡತಕ್ಕೆ ಹೋಗಬಾರದು

(ಗೊಂದಲ)

ಅಧ್ಯಕ್ಷರು: ವಿಷಯಾಂತರ ಬೇಡ. ತಾವು ಮಾತನಾಡುತ್ತಿರುವುದು ಯಾವುದೂ ಕಡತಕ್ಕೆ ಹೋಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಯಾವುದನ್ನೂ ಕಡತಕ್ಕೆ ತೆಗೆದುಕೊಳ್ಳಬೇಡಿ

(ಗೊಂದಲ)

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ದಾಖಲೆ ಮಾಡಿಕೊಂಡಿರುವುದಿಲ್ಲ)

(ಗೊಂದಲ)

ಅಧ್ಯಕ್ಷರು: ತಾವು ಹೇಳುತ್ತಿರುವುದು ಯಾವುದೂ ಕಡತಕ್ಕೆ ಹೋಗುತ್ತಿಲ್ಲ

(ಗೊಂದಲ)

ಅಧ್ಯಕ್ಷರು: ಯಾರೂ ಇಲ್ಲಿ ರಾಜ್ಯಪಾಲರ ಬಗ್ಗೆ ಮಾತನಾಡುವಂತಹ ಅವಶ್ಯಕತೆ

---

* ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಇಲ್ಲ. ರಾಜ್ಯಪಾಲರ ಬಗ್ಗೆ ಯಾರೂ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

(ಗೊಂದಲ)

ಅಧ್ಯಕ್ಷರು: ಯಾವುದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ

(ಗೊಂದಲ)

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ದಾಖಲೆ ಮಾಡಿಕೊಂಡಿರುವುದಿಲ್ಲ)

(ಗೊಂದಲ)

Sri T. B. Jayachandra: I am on point of order

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ (ಶಿರಾ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಹುದ್ದೆಯ ಜವಾಬ್ದಾರಿ ಯಾವ ರೀತಿ ಇದೆ ಎಂದು ಸಂವಿಧಾನದಲ್ಲಿ ಹೇಳಲಾಗಿದೆ ಅದನ್ನು ಮತ್ತೆ ನಾವು ಹೇಳಬೇಕಾಗಿಲ್ಲ. ಸಂವಿಧಾನದಲ್ಲಿ ನಮೂದಾಗಿದೆ. ರಾಜ್ಯಪಾಲರ ಬಗ್ಗೆ ಯಾವುದೇ ವಿಚಾರವನ್ನು ಕೂಡ, ಪ್ರಸ್ತಾಪವಾಗುವ ವಿಚಾರಗಳು ಸರಿಯೇ ಎನ್ನುವ ವಿಚಾರವನ್ನು ನಿಮಗೆ ಕೇಳುತ್ತಿದ್ದೇನೆ. ಸನ್ಮಾನ್ಯ ಸದಸ್ಯರು ತಂದಿರತಕ್ಕ ವಿಚಾರ, ನಾನು ವೈಯಕ್ತಿಕವಾಗಿ ಹೇಳುತ್ತಿದ್ದೇನೆ. It is purely an administrative matter between the Government and Governor. Can these issues be discussed on the floor of the House? ಅದನ್ನೂ ಕೂಡ, ಮಾತನಾಡುವಂತಹ ಸಂದರ್ಭದಲ್ಲಿಯೂ ಕೂಡ ಒಂದು ಪಕ್ಷದ ರಾಜ್ಯಾಧ್ಯಕ್ಷರಾಗಿರತಕ್ಕಂಥವರು ಅವರು ಮಾಡುವಂತಹ ಆರೋಪಗಳನ್ನು ನೋಡಿದಾಗ, ರಾಜ್ಯಪಾಲರು ಬಂದು ಸರ್ಕಾರ ಕೊಟ್ಟಿದಂತಹ ಭಾಷಣವನ್ನು ಓದಬೇಕೇ? ನಾವು ರಾಜ್ಯಪಾಲರಿಗೆ ಕೊಡತಕ್ಕಂಥ ವಂದನಾ ನಿರ್ಣಯ ಏನು? ಯಾವ ರೀತಿಯಾಗಿ ನಾವು ನಡೆದುಕೊಳ್ಳುತ್ತೇವೆ. ಇವರು ಆಡತಕ್ಕ ಮಾತು, ನಡೆದುಕೊಳ್ಳುತ್ತಿರುವ ನಡವಳಿಕೆ ನೋಡಿದರೆ ಅದಕ್ಕೆ ಏನಾದರೂ ಗೌರವ ಬರುತ್ತದೆಯೇ? ದಯಮಾಡಿ ಮಾನ್ಯ ಅಧ್ಯಕ್ಷರೆ, ತಾವು ಇಂತಹ ವಿಚಾರಗಳ ಚರ್ಚೆಗೆ ಅವಕಾಶವನ್ನೇ ಕೊಡಬಾರದು. It is a purely an administrative matter between the Governor and the Government and it cannot be discussed on the floor of the House. That is my submission.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲು ಎದ್ದು ನಿಂತಿದ್ದಾರೆ. ಅವರಿಗೆ ಅವಕಾಶ ಕೊಡೋಣ.

(ಗೊಂದಲ)

ಅಧ್ಯಕ್ಷರು: ಮಾನ್ಯ ಈಶ್ವರಪ್ಪನವರೇ ತಾವು ಅನಂತರ ಮಾತನಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರೋ ಇಲ್ಲವೋ?

ಅಧ್ಯಕ್ಷರು: ಅವಕಾಶ ಕೊಟ್ಟಿದ್ದೇನೆ. ಮಾತನಾಡಿ

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರು Deputy Leader ರವರು ಒಂದು point of order ಅನ್ನು raise ಮಾಡಿದ್ದಾರೆ. ಈ ಸದನದಲ್ಲಿ Governor ಎಂದರೆ, he is the Head of the Government ಅವರ ವಿರುದ್ಧವೇ ನಾವು ಅವಾಚ್ಯ ಶಬ್ಧಗಳನ್ನು, ಸಂವಿಧಾನದ ಹುದ್ದೆಯನ್ನು . . . .

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ: ಅವಾಚ್ಯ ಶಬ್ದ ಎನ್ನುವುದು ಸರಿಯಲ್ಲ

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅಗೌರವ ತರತಕ್ಕ . . . .

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ: ಅದನ್ನು ಬೇಕಾದರೆ ಹೇಳಿ, ಅವಾಚ್ಯ ಶಬ್ದಗಳನ್ನು ಬೇಕಾದರೆ ಹೇಳುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಆಯಿತು, ಅಗೌರವ, ಅವಹೇಳನಾ . . .

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ: ಹೇಳಿ, ಅವಾಚ್ಯ ಅಲ್ಲ ತಾನೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಆಯಿತು, ಅವಾಚ್ಯ ಎನ್ನುವ ಶಬ್ಧವನ್ನು ಬಿಡೋಣ

ಶ್ರೀ ಕೆ. ಎಸ್. ಈಶ್ವರಪ್ಪ: ನನಗೆ ಅವಾಚ್ಯ ಶಬ್ದವೂ ಬರುತ್ತದೆ ಅದನ್ನೂ ಬೇಕಾದರೆ ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಸಿದ್ದರಾಮಯ್ಯ: ಅವಾಚ್ಯವೂ ಬರುತ್ತದೆ, ಅಗೌರವವೂ ಬರುತ್ತದೆ ಆ ವಿಷಯಕ್ಕೇ ಸಂಬಂಧಿಸಿದಂತೆ ಒಂದು ದಿನ ಚರ್ಚೆ ಮಾಡೋಣ.

ಶ್ರೀ ಕೆ. ಎಸ್. ಈಶ್ವರಪ್ಪ: ಮಾಡಿ, ಈಗ ಅವಾಚ್ಯ ಶಬ್ಧ ಬಳಸಿದ್ದೇನೆ ಎಂದು ಇಲ್ಲ ಅಲ್ಲವೇ?

ಅಧ್ಯಕ್ಷರು: ಇಲ್ಲ

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅಗೌರವ ಅವಹೇಳನಾ . . .

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವಮಾನಕಾರಿ. ಇದು ಒಬ್ಬರು ರಾಷ್ಟ್ರೀಯ ಪಕ್ಷದ ರೂಲಿಂಗ್ ಪಾರ್ಟಿಯ ಅಧ್ಯಕ್ಷರು ಆಡತಕ್ಕಂಥ ಮಾತುಗಳು. ಇವರು ಹೊರಗಡೆ ಹೇಳುತ್ತಾರೆ, all right ಅಲ್ಲಿ ಏನಾದರೂ ಹೇಳಿಕೊಂಡು ಹೋಗಲಿ. ಇಲ್ಲಿ ಸಂವಿಧಾನದ ರೀತಿಯಲ್ಲಿ ಕೆಲಸ ಮಾಡಬೇಕಾದದ್ದು, ನಿಯಮಾವಳಿಗಳ ಪ್ರಕಾರ ಕೆಲಸ ಮಾಡಬೇಕಾದಂತಹ ಈ ಸದನದಲ್ಲಿ ಸಂವಿಧಾನದ ಹುದ್ದೆ, ಗೌರವ ಇರತಕ್ಕಂಥದ್ದು. ವರ್ಷಕ್ಕೊಮ್ಮೆ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲು ರಾಜ್ಯಪಾಲರನ್ನು ಕರೆಸುತ್ತೇವೆ. ಅವರು address ಮಾಡಿರುವುದಕ್ಕೆ ನಾವು ವಂದನಾ ನಿರ್ಣಯ ಮಾಡುತ್ತೇವೆ. ಅಂದರೆ ಅಷ್ಟು ಉನ್ನತವಾದಂತಹ ಹುದ್ದೆ, ಗೌರವಾನ್ವಿತವಾದ ಹುದ್ದೆ ಘನತೆ ಇರತಕ್ಕಂಥ ಹುದ್ದೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳುತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಆ ಘನತೆಗೆ ಚ್ಯುತಿ ಬರುವಂತಹ ರೀತಿಯಲ್ಲಿ ಸಂವಿಧಾನಕ್ಕೆ ಅವಹೇಳನಾ ಆಗುವಂತಹ ರೀತಿಯಲ್ಲಿ, ಅವರು Head of the State, Head of the Government. Chief Minister is the head of the Government ಅಲ್ಲ. ಅವರು Head of the Government ಅವರ ಹೆಸರಿನಲ್ಲಿ ನಾವು ಎಲ್ಲಾ Notification, orders, ಹೊರಡಿಸುತ್ತೇವೆ. ಈ ರೀತಿ ಇರುವಾಗ, ಅವರು ಇಷ್ಟು ವರ್ಷ ಈ ಸದನದಲ್ಲಿ ಶಾಸಕರಾಗಿ, ಮಂತ್ರಿಗಳಾಗಿ, ವಿರೋಧ ಪಕ್ಷದಲ್ಲಿದುಕೊಂಡು ವಿರೋಧಪಕ್ಷದಲ್ಲಿ ಕೆಲಸ ಮಾಡಿ ಇಷ್ಟೆಲ್ಲಾ ಅನುಭವ ಇದ್ದು, ಇವರಿಗೆ ರಾಜಕೀಯವಾಗಿ ಪದಗಳನ್ನು ಬಳಸಬೇಕೆಂದು ಹೇಳಿ, ಈ ರೀತಿಯಾಗಿ ಕೆಟ್ಟದಾಗಿ ಬಳಸುವುದು ಇದೆಯಲ್ಲಾ, ಅದಕ್ಕೆ ಅವಕಾಶ ಕೊಡತಕ್ಕಂಥದ್ದು ಎಷ್ಟರಮಟ್ಟಿಗೆ ಸರಿ? ತಾವು ಸರಿ ಎಂದರೆ ನಾವು ಅದನ್ನೇ ಮಾಡೋಣ. ದಯಮಾಡಿ ರಾಜ್ಯಪಾಲರಿಗೆ ಅವಹೇಳನಾ ಆಗುವಂತಹ ರೀತಿಯಲ್ಲಿ, ಅಗೌರವ ಆಗುವಂತಹ ರೀತಿಯಲ್ಲಿ ಪದಗಳನ್ನು ಬಳಸಬಾರದು. ಅವರಿಗೆ ಅವಮಾನ ಆದರೆ ಸಂವಿಧಾನಕ್ಕೆ ಅವಹೇಳನಾ ಮಾಡಿದ ರೀತಿ ಆಗುತ್ತದೆ.

ಅಧ್ಯಕ್ಷರು: ಎಲ್ಲವನ್ನೂ ಕಡತದಿಂದ ತೆಗೆದುಹಾಕಲಾಗಿದೆ

ಶ್ರೀ ಸಿದ್ದರಾಮಯ್ಯ: ಆದ್ದರಿಂದ ತಾವು ದಯಮಾಡಿ ಇದಕ್ಕೆ ಪದೇ ಪದೇ ಅವಕಾಶ ಕೊಡಬಾರದು. ಅದರ ಮೇಲೆ ಚರ್ಚೆ ಯಾಗುವುದಕ್ಕೆ ಅವಕಾಶ ಕೊಡಬಾರದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇಲ್ಲಿ ಮಾತನಾಡಿರುವುದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ಈ ರೀತಿ ಮತನಾಡುವುದಕ್ಕೆ ಆಸ್ಪದ ಇರಬಾರದು.

(ಗೊಂದಲ)

ಅಧ್ಯಕ್ಷರು: ಇದರ ಬಗ್ಗೆ ಇನ್ನು ಚರ್ಚೆ ಬೇಡ. ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಜಯಚಂದ್ರರವರ ಮಾತನ್ನು ನಾನು ನೂರಕ್ಕೆ ನೂರು ಒಪ್ಪಿಕೊಳ್ಳುತ್ತೇನೆ. ರಾಜ್ಯಪಾಲರ

ಹುದ್ದೆ, ಅದು ಸಂವಿಧಾನಬದ್ಧವಾದಂತಹ ಒಂದು ಸ್ಥಾನಮಾನದ ಹುದ್ದೆ. ಅವರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಸೂಕ್ತವಲ್ಲ ಎಂದು ಹೇಳಿ ಅವರು ವಾದ ಮಾಡಿದ್ದು ಸರಿ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ಯಾವಾಗ ಇಲ್ಲಿ ಲೋಕಾಯುಕ್ತದ ಬಗ್ಗೆ ಪ್ರಸ್ತಾಪವಾಯಿತು, ನಾನು ಮುಖ್ಯಮಂತ್ರಿಯಾಗಿ ಲೋಕಾಯುಕ್ತದ ನೇಮಕಾತಿಗೆ ಸಂಬಂಧಪಟ್ಟ ಪ್ರಕ್ರಿಯೆಗಳನ್ನು ಚಾಚೂ ತಪ್ಪದೇ ಈ ಹಿಂದೆ ಕರ್ನಾಟಕ ಲೋಕಾಯುಕ್ತದ appointment ಸಂದರ್ಭದಲ್ಲಿ ಯಾವ ರೀತಿ ನಡೆದಿದೆ ಆ ಎಲ್ಲವನ್ನೂ ನಿಶ್ಚಯವಾಗಿ ಪಾಲನೆ ಮಾಡಿ ನಾನು ನನ್ನ ಕೆಲಸ ಕಾರ್ಯಗಳನ್ನು ಮಾಡಿದ್ದೇನೆ. ನನ್ನ ಕಡೆಯಿಂದ ಪೂರ್ತಿಯಾಗಿ ಹೋಗಿ ಅದು ರಾಜ್ಯಪಾಲರ ಕಛೇರಿಯಲ್ಲಿದೆ. ಇವತ್ತು ball is in the court of the Governer. ನಮ್ಮ ಕಡೆಯಿಂದ ಯಾವುದೇ ವಿಳಂಬಗಳು ಆಗಲಿಲ್ಲ. ನಾನು ಕಡತವನ್ನು ಕಳುಹಿಸಿದ ನಂತರ ಕೂಡ ಅದರ ವಿಚಾರದಲ್ಲಿ ವಿಮರ್ಶೆ ಮಾಡುವುದಕ್ಕಾಗಿ ಎರಡು ಬಾರಿ ರಾಜ್ಯಪಾಲರ ಕಛೇರಿಗೆ ಹೋಗಿ ಘನತೆವೆತ್ತ ರಾಜ್ಯಪಾಲರನ್ನು ಬೇಟಿ ಮಾಡಿ ಚರ್ಚೆ ಮಾಡಿ ಬಂದಿದ್ದೇನೆ. ಆದಕಾರಣ ಸರ್ಕಾರದ ಕಡೆಯಿಂದ ಲೋಕಾಯುಕ್ತರ ನೇಮಕಾತಿಯ ಬಗ್ಗೆ ಯಾವುದೇ ವಿಳಂಬಗಳಾಗಲಿ, ಆ ಪ್ರಕ್ರಿಯೆಯಲ್ಲಿ ಯಾವುದೇ ತಪ್ಪುಗಳಾಗಲಿ ಆಗಿಲ್ಲ. ಎಂದು ಹೇಳುವಂತಹ ಭಾರಿ ಸ್ಪಷ್ಟವಾಗಿ ಸ್ಪಷ್ಟೀಕರಣ ಮಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಇದರ ಬಗ್ಗೆ ಚರ್ಚೆಗಳು ಆಗಬೇಕೆಂದು ಹೇಳುತ್ತೇನೆ ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಆದರೆ ಚರ್ಚೆ ಈ ಪ್ರಸ್ತಾವದಲ್ಲಿ ಅಲ್ಲ. ಚರ್ಚೆ ಮಾಡುವ ಬಗ್ಗೆ ಅವರು ಬೇರೆ ಪ್ರಸ್ತಾವದಲ್ಲಿ ತರಲಿ, ಚರ್ಚೆಗೆ ಸರ್ಕಾರ ಸಿದ್ಧವಿದೆ. ನಾನು ಮುಖ್ಯಮಂತ್ರಿಯಾಗಿ ಹೇಳುತ್ತಿದ್ದೇನೆ. ಸದನದ ಯಾವುದೇ ಚರ್ಚೆಗಳಿಗೆ ಪಲಾಯನವಾದವನ್ನು ಈ ಸರ್ಕಾರ ಯಾವತ್ತು ಮಾಡುವುದಿಲ್ಲ. ನಿಮ್ಮ ಯಾವುದೇ ಪ್ರಸ್ತಾಪಗಳಿಗೆ ನಾವು ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇವೆ. ಆದರೆ ಈ ಪ್ರಸ್ತಾವವನ್ನು ಬೇರೆ ಸ್ವರೂಪದಲ್ಲಿ ತಂದರೆ ಚರ್ಚೆಗೆ ತೆಗದುಕೊಳ್ಳುವುದಕ್ಕೆ ನನ್ನ ಅಭ್ಯಂತರವೇನು ಇಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ . . . .

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ: ತಾವು ಮಾತನಾಡಿದರೆ ನಮಗೆ ಸ್ಫೂರ್ತಿಯಾಗುತ್ತದೆ

ಶ್ರೀ ಕೆ. ಎಸ್. ಈಶ್ವರಪ್ಪ: ಆಯಿತು

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಈಗ ನಾನು ಮಾತನಾಡುತ್ತೇನೆ

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ತಾವು ಒಂದು ನಿಮಿಷ ತಾಳಿ

ಶ್ರೀ ಕೆ. ಎಸ್. ಈಶ್ವರಪ್ಪ: ನಾನು ಮಾತನಾಡುವುದಕ್ಕೆ ಹೋದರೆ ನೀವು ಮಲಗಿರುತ್ತೀರಿ ನನಗೆ ಅದೇ ಬೇಜಾರಾಗಿದೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ನಾನು ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಕೆ. ಎಸ್. ಈಶ್ವರಪ್ಪ: ಸದನದಲ್ಲಿ ಒಂದು ರೀತಿಯಾಗಿ ಸ್ಫೂರ್ತಿಯನ್ನು ಕೊಟ್ಟಿರುವವರೇ ನಿವಾಗಿದ್ದೀರಿ. ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಬೇರೆ ಎಲ್ಲದಕ್ಕೂ ಮಲಗಿರುತ್ತೀರಿ, ಇದೊಂದಕ್ಕೆ ಎದ್ದಿದ್ದೀರಿ. ಒಳ್ಳೆಯದು. ಮಾನ್ಯ ವಿರೋಧಪಕ್ಷದ ನಾಯಕರ ಬಗ್ಗೆ ನನಗೆ ಗೌರವವಿದೆ ಎಂದು ನಾನು ಹೇಳುತ್ತಿದ್ದೇನೆ ನಾನು ಇಲ್ಲವೆಂದು ಹೇಳಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಹೇಗೆ acting ಮಾಡುತ್ತಾರೆಂದು ನಾನು ಪ್ರಶ್ನೆ ಮಾಡುವುದಿಲ್ಲ. ಒಂದು ರಾಜ್ಯದ ರಾಷ್ಟ್ರೀಯ ಪಕ್ಷದ ಅಧ್ಯಕ್ಷರಾಗಿ ಹೀಗೆ ಮಾಡುವುದು ಸರಿಯೇ? ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಕೇಳುವುದಿಷ್ಟೆ, ರಾಜ್ಯಪಾಲರ ಬಗ್ಗೆ ನಾನು ಏತಕ್ಕಾಗಿ ಪ್ರಸ್ತಾಪ ಮಾಡಿದ್ದೇನೆ, ಇದರ ಬಗ್ಗೆ ತಾವೇ ಸ್ಪಷ್ಟನೆ ಮಾಡಿ. ನಾನು ಮೊದಲನೇ ಸಲ ಏನು ಹೇಳಿದ್ದೆ [*] ಎಂದು ಹೇಳಿದ್ದೆ ಅದನ್ನು ನಾನು ಹತ್ತು ಸಾರಿಯೂ ಹೇಳುವವನೆ. ಒಂದು ನಿಮಿಷ ತಡೆಯಿರಿ.

ಅಧ್ಯಕ್ಷರು: No, No.

ಶ್ರೀ ಕೆ. ಎಸ್. ಈಶ್ವರಪ್ಪ: ಏಕೆ?

(ಗೊಂದಲ)

ಅಧ್ಯಕ್ಷರು: No, ಅದು ಯಾವುದು ದಾಖಲೆಗೆ ಹೋಗಬಾರದು

(ಗೊಂದಲ)

ಅಧ್ಯಕ್ಷರು: ಈಗ ನಾನು ಇದನ್ನು ಮುಕ್ತಾಯ ಮಾಡುತ್ತೇನೆ

(ಗೊಂದಲ)

---

* ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಕೆ. ಎಸ್. ಈಶ್ವರಪ್ಪ: ತಾವು ಸಂವಿಧಾನದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಹೌದಲ್ಲವೇ, ಸಂವಿಧಾನದ ಬಗ್ಗೆ ಖಂಡಿತವಾಗಿ ಪ್ರಾಣವನ್ನು ಕೋಡೋಣ. ಸಂವಿಧಾನದ ಗೌರವವನ್ನು ಉಳಿಸುವುದಕೋಸ್ಕರ ನಾವು ಮತ್ತು ನೀವು ಸೇರಿಕೋಂಡು ಖಂಡಿತವಾಗಿ ಗೌರವವನ್ನು ಕೊಡೋಣ ಪ್ರಾಣವನ್ನು ಕೋಡೋಣ. ಇಲ್ಲಿ ಪ್ರಶ್ನೆ ಏನು ಬಂದಿದೆ ಎಂದರೆ ಸಂವಿಧಾನದ ಬಗ್ಗೆ ಮಾತನಾಡುವಾಗ ಈ ಸದನದಲ್ಲಿ ನಾವು ಅಷ್ಟು ಜನರು ಸೇರಿ ಗೋಹತ್ಯೆ ನಿಷೇಧ ಆಗಬೇಕೆಂದು ಬಿಲ್ಲನ್ನು ಕಳುಹಿಸಿದ್ದೇವೆ. ಈ ಬಿಲ್ಲು ಕರ್ನಾಟಕ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಬಿಲ್ಲನ್ನು ಹೊಸದಾಗಿ ದೇಶದಲ್ಲಿ ಯಾರು ಮಾಡದೇ ಇರುವುದನ್ನು ನಾವು ಮಾಡಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಕಾಂಗ್ರೇಸ್ ರಾಜ್ಯ ಸೇರಿ ಯಾವ ಯಾವ ಅಂಶಗಳು ಇವೆ ಅದೇ ಅಂಶಗಳನ್ನು ನಾವೆಲ್ಲರೂ ಸೇರಿ ಬಿಲ್ಲನ್ನು ಪಾಸ್ ಮಾಡಿ ರಾಜ್ಯಪಾಲರಿಗೆ ಕಳುಹಿಸಿದ್ದೇವೆ. ಸಂವಿಧಾನವನ್ನು ಎತ್ತಿಹಿಡಿಯಬೇಕಾದಂತಹ ರಾಜ್ಯಪಾಲರು ಆ ಬಿಲ್ಲನ್ನು ಪಾಸು ಮಾಡಿಲಿಲ್ಲ. ಅದನ್ನು ರಾಷ್ಟ್ರಪತಿಗಳಿಗೆ ಕಳುಹಿಸಿಕೊಟ್ಟಿದ್ದಾರೆ ಇದು ಸಂವಿಧಾನ. ಸ್ವಲ್ಪ ತಡೆಯಿರಿ, ಪ್ಲೀಸ್ ದಯವಿಟ್ಟು ಕೇಳಿ.

(ಗೊಂದಲ)

ಶ್ರೀ ತನ್ವೀರ್ ಸೇಠ್: ಮಾನ್ಯ ರಾಜ್ಯಪಾಲರು ಸಂವಿಧಾನಬದ್ಧವಾಗಿಯೇ ಅದನ್ನು ರಾಷ್ಟ್ರಪತಿಗಳಿಗೆ ಕಳುಹಿಸಿಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರು ಗೋಹತ್ಯ ನಿಷೇದದ ಬಗ್ಗೆ ಮಾತನಾಡಿದ್ದಾರೆ

ಅಧ್ಯಕ್ಷರು: ಬೇಡ ಅದು ವಿಷಯಾಂತರವಾಗುತ್ತದೆ. ಇಲ್ಲಿ ಚರ್ಚೆಗೆ ಅವಕಾಶ ಕೊಡುವುದು ಬೇಡ.

ಶ್ರೀ ಸಿದ್ದರಾಮಯ್ಯ: ಅವರು ಏತಕ್ಕಾಗಿ ಮಾತನಾಡಬೇಕು. ಅವರು ಪ್ರಸ್ತಾಪ ಇಲ್ಲದಿರುವಂತಹ ವಿಚಾರವನ್ನು ಇಲ್ಲಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು: ಇದು ವಿಷಯಾಂತರವಾಗುತ್ತಿದೆ. ನಾವು ಇಲ್ಲಿ ಯಾವುದನ್ನು ಚರ್ಚೆ ಮಾಡಬೇಕೋ ಅದನ್ನು ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಇಲ್ಲಿ ಮಾತನಾಡುವುದಕ್ಕೆ

ಯಾರಿಗೂ ಅವಕಾಶವಿಲ್ಲ ರಾಜ್ಯದಲ್ಲಿ ಲೋಕಾಯುಕ್ತವನ್ನು ನೆನೆಗುದಿಗೆ . . .

(ಗೊಂದಲ)

Sri T. B. Jayachandra: I have raised the Point of Order

ಶ್ರೀ ಕೆ. ಎಸ್. ಈಶ್ವರಪ್ಪ: ನಾನು ವಿಷಯವನ್ನು ಹೇಳಲೇ ಇಲ್ಲ ಆಗಲೇ Point of Order ಹೇಳಿದರೆ ಹೇಗೆ, ಮಾನ್ಯ ಜಯಚಂದ್ರರವರೆ, ನಾನು ಮಾತನಾಡಿ ಇನ್ನು ಮುಗಿಸಲೇ ಇಲ್ಲ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಏನು ಇದು

(ಗೊಂದಲ)

Sri T. B. Jayachandra: I have raised the Point of order. I want a Ruling from the Chair.

ಶ್ರೀ ಕೆ. ಎಸ್. ಈಶ್ವರಪ್ಪ: ಸಾರ್ ಒಂದು ನಿಮಿಷ ತಾಳಿ. ನನಗೆ ಮಾತನಾಡುವುದಕ್ಕೆ ಅವಕಾಶ ಇಲ್ಲವೇ?

ಅಧ್ಯಕ್ಷರು: ಒಂದು ನಿಮಿಷ ತಾವು ಕುಳಿತುಕೊಳ್ಳಿ, ಅವರು ಮಾತನಾಡಿ ಮುಗಿಸಲಿ

ಶ್ರೀ ಕೆ. ಎಸ್. ಈಶ್ವರಪ್ಪ: ನಾನು ಮಾತನಾಡುವುದಕ್ಕೆ ಬಿಡಿ. ಏಕೆಂದರೆ, ಸಂವಿಧಾನಬದ್ಧವಾಗಿ ನೀವು ಅವರ ಬಗ್ಗೆ ಒಳ್ಳೆಯ ಪದಗಳನ್ನು ಹೇಳಿದ್ದೀರಿ. ಗೌರವಾನ್ವಿತ ರಾಜ್ಯಪಾಲರು, ಘನತೆಗೆ ಚ್ಯುತಿ ಮಾಡುವಂತಹ ವ್ಯವಸ್ಥೆ ಇನ್ನು ಅನೇಕ ಪದಗಳನ್ನು ಹೇಳಿದ್ದೀರಿ ತುಂಬಾ ಸಂತೋಷ. ಸಂವಿಧಾನದಲ್ಲಿಯೇ ರಾಜ್ಯಪಾಲರು ಸರ್ಕಾರ ಮಾಡಿರುವಂತಹ ಶಿಫಾರಸ್ಸನ್ನು ತಿರಸ್ಕರಿಸುವ mandatory ಅಧಿಕಾರ ಸಂವಿಧಾನದಲ್ಲಿ ಇಲ್ಲ. ಏಕೆ ಸ್ವಾಮಿ ಸಂವಿಧಾನದ ಪ್ರಕಾರ ಇವರು reject ಮಾಡಿ ಕಳಹಿಸುತ್ತಿದ್ದಾರೆ. ಇನ್ನು ಮೂರನೆಯದಾಗಿ ಹೇಳುವುದಾದರೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, . . .

ಶ್ರೀ ಕೆ. ಎಸ್. ಈಶ್ವರಪ್ಪ: ತಾವು ಇಷ್ಟು ಫಾಸ್ಟ್ ಆಗಿ ಎದ್ದು ನಿಂತು ಬಿಟ್ಟರೆ ಹೇಗೆ

ಶ್ರೀ ಟಿ. ಬಿ. ಜಯಚಂದ್ರ: ಹೇಳಿ ಸಾರ್

Mr. Speaker: He has not rejected

ಶ್ರೀ ಕೆ. ಎಸ್. ಈಶ್ವರಪ್ಪ: ನೀವೇ ಹೇಳಿ. ಕರ್ನಾಟಕ ರಾಜ್ಯದಲ್ಲಿ ಇಡೀ ಸದನ ಮೊದಲೇ ತೀರ್ಮಾನವನ್ನು ಮಾಡಿ ಅಕ್ರಮಸಕ್ರಮ ಬಿಲ್ಲನ್ನು ಪಾಸು ಮಾಡಿ ಕಳುಹಿಸಿದ್ದೆವು. ಅಕ್ರಮ ಸಕ್ರಮ ಬೇಕೆಂದು ನೀವು ಹೇಳುತ್ತೀರಿ. ಆ ರಾಜ್ಯಪಾಲರಿಗೆ ಬೇಡ ಏಕೆ, ಸ್ವಾಮಿ ಈ ಸದನದ ಬಗ್ಗೆ ಗೌರವವಿಲ್ಲ. ಸಂವಿಧಾನದ ಬಗ್ಗೆ ಗೌರವವಿಲ್ಲ. ಅವರಿಗೆ ಖುಷಿ ಬಂದ ಹಾಗೆ ಮಾಡಿಕೊಂಡು ಹೋಗುತ್ತಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ತಾವು ಓದಿ ಹೇಳಿ

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, . . .

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ನನಗೆ ಮಾತನಡುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ರೇವಣ್ಣನವರೆ, ನಾನು Point of order ಎತ್ತಿದ್ದೇನೆ. ನಾನು ನಿಮ್ಮ ವಿಚಾರಕ್ಕೆ ಬಂದಿಲ್ಲ. ಜಿಜೆಪಿ ಅಧ್ಯಕ್ಷರಾಗಿರುವಂತಹ ಮಾನ್ಯ ಕೆ.ಎಸ್. ಈಶ್ವರಪ್ಪನವರು ಎತ್ತಿರುವಂತಹ ವಿಚಾರ ಗೋಹತ್ಯೆ ನಿಷೇದ ಇರಬಹುದು, ಅಕ್ರಮ ಸಕ್ರಮದ ವಿಚಾರದಲ್ಲಿ ರಾಜ್ಯಪಾಲರ ಹಕ್ಕನ್ನು ಪ್ರಶ್ನೆ ಮಾಡುವುದರ ಮುಖೇನ ಸಂವಿಧಾನವನ್ನು ಪ್ರಶ್ನೆ ಮಾಡುತ್ತಿದ್ದಾರೆ ಎಂದು ನನ್ನ ಅಭಿಪ್ರಾಯವಾಗಿದೆ. ದಯಮಾಡಿ ಈ ರೀತಿಯಾಗಿ ರಾಜ್ಯಪಾಲರ ವಿಚಾರವಾಗಿ ನಾವು ಲಘುವಾಗಿ ಮಾತನಾಡಬಾರದು.

ಶ್ರೀ ಡಿ. ಎನ್. ಜೀವರಾಜ್: ಅವರು ಸದನದ ಹಕ್ಕನ್ನು ಕೇಳುತ್ತಿದ್ದಾರೆ

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಯೋಚನೆ ಮಾಡಬೇಕು. ಅವರು ಇಲ್ಲಿ ನಡೆದಿರುವಂತಹ ಎಲ್ಲಾ ವಿಚಾರವನ್ನು . . . .

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ತಾವು ಹೇಳುತ್ತಿರುವ ರೂಲ್ ಯಾವುದು?

ಶ್ರೀ ಟಿ. ಬಿ. ಜಯಚಂದ್ರ: ದಯಮಾಡಿ ಅವರಿಗೆ ಛೀಮಾರಿ ಹಾಕಬೇಕಾಗುತ್ತದೆ.

ಸದನದಿಂದ ಹೊರಗೆ ಹಾಕಬೇಕಾಗುತ್ತದೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು: ತಾವು ಹೇಳುತ್ತಿರುವ ರೂಲ್ ಯಾವುದು ನಿಯಮಾವಳಿ ಯಾವುದು ಎಂದು ಹೇಳಬೇಕು.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ನಿಮಗೆ ಸಂವಿಧಾನದ ಬಗ್ಗೆ ಗೌರವವಿದೆಯೇ? ರಾಜ್ಯಪಾಲರ ಬಗ್ಗೆ ಯಾವ ರೀತಿಯಾಗಿ ಮಾತನಾಡಬೇಕೆಂದು ಗೊತ್ತಿಲ್ಲದವರು.

ಅಧ್ಯಕ್ಷರು: ಯಾವ ನಿಯಮದ ಪ್ರಕಾರ ಮಾತನಾಡುತ್ತಿದ್ದೀರಿ, ಆ ನಿಯಮವನ್ನು ಹೇಳಿ.

Sri T. B. Jayachandra: My point is this, . . .

Mr. Speaker: Under which rule?

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ರಾಜ್ಯಪಾಲರ ಬಗ್ಗೆ . . .

ಅಧ್ಯಕ್ಷರು: ತಾವು ಯಾವ ರೂಲ್‌ಇಟ್ಟುಕೊಂಡು ಮಾತನಾಡುತ್ತಿದ್ದೀರಿ ಅದರ ಬಗ್ಗೆ ಹೇಳಿ. I will go through it.

Sri T. B. Jayachandra: Point of order relates to an interpretation for enforcement of rules and articles of the Constitution.

Mr. Speaker: Which rule, ತಾವು ರೂಲ್ ಬಗ್ಗೆ ಹೇಳಿ? ನೀವು 350 ರೂಲ್ ಅನ್ನು ಓದುತ್ತಿದ್ದೀರಾ?

ಶ್ರೀ ಟಿ. ಬಿ. ಜಯಚಂದ್ರ: ಹೌದು ನಿಮಗೆ ಸಂವಿಧಾನದ ಬಗ್ಗೆ Head of the state ಬಗ್ಗೆ ನೀವು ಈ ರೀತಿಯಾಗಿ ಲಘುವಾಗಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಇನ್ನು ನಾಳೆ ದಿವಸ ಅವರು ಯಾವ ರೀತಿಯಾಗಿ ಗೌರವದಿಂದ ಕರೆದುಕೊಂಡು ಬಂದು ರಾಜ್ಯಪಾಲರಿಂದ ಭಾಷಣವನ್ನು ಮಾಡಿಸುತ್ತೀರಿ.

ಅಧ್ಯಕ್ಷರು: It is violation ಎಂದು ಹೇಳುತ್ತಿದ್ದೀರಿ.

Sri T. B. Jayachandra: Yes. It is a violation

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ...

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ರಾಜ್ಯಪಾಲರ ಬಗ್ಗೆ ಈ ರೀತಿಯಾಗಿ ಮಾತನಾಡಿದರೆ ಅದು ಸರಿಯಾಗುವುದಿಲ್ಲ.

ಅಧ್ಯಕ್ಷರು: ಅವೆಲ್ಲವನ್ನು ಕಡತದಿಂದ ತೆಗೆಸಿಹಾಕಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ: ಒಬ್ಬ ರಾಜ್ಯದ ಬಿಜೆಪಿ ಅಧ್ಯಕ್ಷರಾಗಿರುವಂತಹವರು . . .

Mr. Speaker: That is different issue.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಸಂವಿಧಾನವನ್ನೇ ಅರ್ಥಮಾಡಿಕೊಳ್ಳದೆ ಇರುವವರನ್ನು ಸದನದ ಸದಸ್ಯರೆಂದು ಒಪ್ಪಿಕೊಳ್ಳಬೇಕೇ?

ಶ್ರೀ ಡಿ. ಎನ್. ಜೀವರಾಜ್: ಇವರು ಸದನದ ಹಕ್ಕನ್ನು ಪ್ರಶ್ನಿಸುತ್ತಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶವನ್ನು ಕೊಡಿ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧಪಕ್ಷದ ನಾಯಕರು): ನಾನು ಮಾತನಾಡಿದ ಮೇಲೆ ತಾವು ಮಾತನಾಡಿ.

ಅಧ್ಯಕ್ಷರು: ಅದನ್ನು ನಾನು ನೋಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಜಯಚಂದ್ರರವರು point of order ಅನ್ನು ರೈಸ್ ಮಾಡಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, point of order ನಾನು ಮಾತನಾಡುವುದಕ್ಕೆ ಎರಡು ನಿಮಿಷ ಅವಕಾಶವನ್ನು ಕೊಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ರೇವಣ್ಣನವರೆ, ಆ ಮೇಲೆ ಮಾತನಾಡಿ

ಅಧ್ಯಕ್ಷರು: ಅವರು Adjournment Motion ಹೇಳುತ್ತಿದ್ದಾರೆ. ತಾವು Point of order ಬಗ್ಗೆ ಹೇಳುತ್ತಿದ್ದೀರಿ. ನಾನು ಯಾವುದನ್ನು ಹಿಯರ್ ಮಾಡಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ಸಂವಿಧಾನದ ಚೌಕಟ್ಟಿನಲ್ಲಿ ಕೆಲಸ ಮಾಡುವುದಕ್ಕೋಸ್ಕರ ಬರುವುದು ನೀವು ಕೂಡ ಅದೇ ರೀತಿಯಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ. ನಾವುಗಳು ಸಂವಿಧಾನವನ್ನು ಬಿಟ್ಟು ಮಾಡುವುದಕ್ಕಾಗುವುದಿಲ್ಲ. ಯಾರೇ ಗೌರವಾನ್ವಿತ ಸದಸ್ಯರು ಮಾತನಾಡುವಾಗ ರಾಜ್ಯಪಾಲರನ್ನು ಇವರು ಯಾವುದೋ ಕಾರಣಕ್ಕೆ ಇಲ್ಲಿಗೆ ತೆಗೆದುಕೊಂಡು ಬಂದು ಅವರಿಗೆ ಗೌರವ ಕೊಡದ ರೀತಿಯಲ್ಲಿ ನಡೆದುಕೊಳ್ಳುವುದು ಇದೆಯಲ್ಲಾ ಅದಕ್ಕೆ ಯಾವುದೇ ಸಂದರ್ಭದಲ್ಲಿಯೂ ನೀವು ಕೂಡ ಅವಕಾಶವನ್ನು ಮಾಡಿಕೊಡಬಾರದು ಇದು ನಂಬರ್ 1, Slaughter Bill ಹೋಗಿದೆ ಎಂದು ಮಾನ್ಯ ಈಶ್ವರಪ್ಪನವರು ಹೇಳುತ್ತಾರೆ ರಾಜ್ಯಪಾಲರಿಗೆ ಆ ಬಿಲ್ ಅನ್ನು President ಅವರಿಗೆ ಕಳುಹಿಸುವ ಅಧಿಕಾರ ಸಂವಿಧಾನದಲ್ಲಿ ಇದೆಯೋ ಇಲ್ಲವೋ? ಇದೆಯಲ್ಲವೇ? ಹಾಗಿದ್ದರೆ ಅದನ್ನು ನೀವು ಹೇಗೆ ಪ್ರಶ್ನಿಸುತ್ತೀರಿ? ಇಡೀ ಸಂವಿಧಾನವನ್ನೇ ಪ್ರಶ್ನೆ ಮಾಡಿಬಿಡುವಿರಾ? ರಾಜ್ಯಪಾಲರಿಗೆ ಆ ಬಿಲ್ ಅನ್ನು ರಾಷ್ಟ್ರಪತಿಗಳಿಗೆ ಕಳುಹಿಸಲಿಕ್ಕೆ ಅಧಿಕಾರ ಇದೆಯೋ ಇಲ್ಲವೋ?

ಶ್ರೀ ಡಿ. ಎನ್. ಜೀವರಾಜ್: ಹಾಗಾದರೆ ಈ ಸದನವೇ ಬೇಡ, ಎಲ್ಲಾ ರಾಜ್ಯಪಾಲರೇ ಮಾಡಿಬಿಡಲಿ, ಈ ಸದನ ಏಕೆ ಬೇಕು?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇಡೀ ಸದನದಲ್ಲಿ ನಾವು ಆ ಬಿಲ್ ಅನ್ನು ಪಾಸ್ ಮಾಡಿಲ್ಲ. ನಾವು ಅದನ್ನು ಮಾಡಕೂಡದು ಎಂದು ತೀವ್ರವಾಗಿ ವಿರೋಧ ಮಾಡಿದ್ದೇವೆ. ಎಲ್ಲಾ ಅಲ್ಲ. Majority ಇದೆ ಎಂದು ಹೇಳಿ ಯಾವ ಕಾಯ್ದೆ ಜನರಿಗೆ ಮಾರಕವಾಗುತ್ತದೆ ಅಂಥ ಕಾಯ್ದೆ ಮಾಡಿಬಿಟ್ಟು ರಾಜ್ಯಪಾಲರು ಅದಕ್ಕೆ ಒಪ್ಪಿಗೆ ಕೊಡಲಿಲ್ಲವೆಂದರೆ ಹೇಗೆ? The Governor has got all the powers to refer the matter to the President of India. ಅದನ್ನು question ಮಾಡಲಿಕ್ಕೆ ಯಾರಿಂದಲೂ ಆಗುವುದಿಲ್ಲ. ಹಾಗಾಗಿ ಈಶ್ವರಪ್ಪನವರೇ ನೀವು ಪದೇ ಪದೇ Slaughter Bill ಗೆ ಅವರು ಒಪ್ಪಿಗೆ ಕೊಡಲಿಲ್ಲ ಎಂದು ಹೇಳಬೇಡಿ ಅವರಿಗೆ ಅಧಿಕಾರ ಇದೆ. ಇಲ್ಲಿ ಲೋಕಾಯುಕ್ತರ ನೇಮಕದ ಬಗ್ಗೆ it is between Government and Governor, ನೀವು ಹೋಗಿ ಅವರೊಂದಿಗೆ ಚರ್ಚೆ ಮಾಡಿ. ಏಕೆ ಲೋಕಾಯುಕ್ತರ ನೇಮಕವಾಗಿಲ್ಲ ಎಂಬ ಬಗ್ಗೆ ನೀವು ರಾಜ್ಯಪಾಲರನ್ನು convince ಮಾಡಿ. On what grounds he has sent it back ಎಂಬ ಬಗ್ಗೆ Chief Minister

ಹೋಗಿ ಅಲ್ಲಿ ಮಾತನಾಡಲಿ. ಅದನ್ನು ಬಿಟ್ಟು ಮಧ್ಯದಲ್ಲಿ ಈ ಸದನದಲ್ಲಿ ಈ ರೀತಿ ಹೇಳಿಸುವಿರಾ? ಇದು ಸದನಕ್ಕೆ ಗೌರವ ತರುವಂಥದ್ದೇ. ದಯಮಾಡಿ ಇಂಥದ್ದಕ್ಕೆ ಅವಕಾಶ ಕೊಡಕೂಡದು. ಮಾನ್ಯ ಅಧ್ಯಕ್ಷರೇ ಇದನ್ನು record ನಿಂದ ತೆಗೆಸಬೇಕು.

(ಗೊಂದಲ)

ಅಧ್ಯಕ್ಷರು: ಈಗಾಗಲೇ ರಾಜ್ಯಪಾಲರ ಬಗ್ಗೆ ಪ್ರಸ್ತಾಪಿಸಿರುವುದನ್ನು ಕಡತದಿಂದ ತೆಗೆದುಹಾಕಲಾಗಿದೆ. ಆದ್ದರಿಂದ ವಿರೋಧಪಕ್ಷದ ಮಾನ್ಯ ಉಪ ನಾಯಕರು ಎತ್ತಿರುವ ಕ್ರಿಯಾಲೋಪವು ಅಪ್ರಸ್ತುತ ಎಂದು ತೀರ್ಮಾನ ಮಾಡಿ ಹಾಗೆಯೇ ಈ ರಾಜ್ಯದಲ್ಲಿ ಲೋಕಾಯುಕ್ತರನ್ನು ನೇಮಕ ಮಾಡುವ ವಿಷಯದಲ್ಲಿ ಈ ನಿಯಮಾವಳಿಯನ್ನು Adjournment Motion ಮೂವ್ ಮಾಡಲಾಗಿದೆ. ಅದು Administrative matter. ಈಗ ಮತ್ತೆ ವಿಷಯಾಂತರವಾಗುತ್ತದೆ. ಏಕೆ ಇಲ್ಲಿ ರಾಜ್ಯಪಾಲರ ಹೆಸರನ್ನು ಎಳೆದು ತರುತ್ತೀರಿ?

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಈ ವಿಷಯ raise ಮಾಡಿದ್ದೇನೆ. ನನಗೆ ಮಾತನಾಡಲಿಕ್ಕೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ರಾಜ್ಯಪಾಲರ ಹೆಸರನ್ನು ಬಿಟ್ಟು ಬೇರೆ ಮಾತನಾಡಿ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಬಗ್ಗೆ ನಮಗೆ ಗೌರವ ಇದೆ. ಅವರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಈಶ್ವರಪ್ಪನವರು ಒಂದು ಮಾತನ್ನು ಹೇಳಿದರು. ಅವರು ರಾಷ್ಟ್ರೀಯ ಅಧ್ಯಕ್ಷರೆಂಬ ಬಗ್ಗೆ ನನಗೆ ಗೌರವವಿದೆ. ಅದರ ಬಗ್ಗೆ ನಾನು ಮಾತನಾಡುತ್ತಿಲ್ಲ. ಆದರೆ ಇವತ್ತು ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವ ಸಂಸ್ಥೆ ಲೋಕಾಯುಕ್ತ. ಆದರೆ ಕಳೆದ 6 ತಿಂಗಳುಗಳಿಂದ ಆ ಸಂಸ್ಥೆಗೆ ಯಾರು ಹೇಳುವವರು, ಕೇಳುವವರು ಇಲ್ಲವೆಂಬ ಪರಿಸ್ಥಿತಿ ಬಂದು ಹೋಗಿದೆ. ನಮ್ಮ ರಾಷ್ಟ್ರೀಯ ಅಧ್ಯಕ್ಷರು ಸಂತೋಷ್ ಹೆಗ್ಡೆಯವರ ಮನೆಗೆ ಹೋಗಿ ಅವರನ್ನು ಕರದುಕೊಂಡು ಲೋಕಾಯುಕ್ತರನ್ನಾಗಿ ನೇಮಕ ಮಾಡಿದರು ಎಂದು ಈಶ್ವರಪ್ಪನವರು ಹೆಳಿದರು ಅದು ಬಹಳ ಸಂತೋಷದ ವಿಷಯ. ಸಂತೋಷ್ ಹೆಗ್ಡೆಯವರ ಬಗ್ಗೆ ನನಗೆ ಗೌರವವಿದೆ. ಆ ವಿಷಯದ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಲೋಕಾಯುಕ್ತರ ನೇಮಕದ ಬಗ್ಗೆ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದೆ. ರಾಜ್ಯಪಾಲರು ಆ ಲೋಕಾಯುಕ್ತರ ನೇಮಕ ಮಾಡಿದರು. ಆದರ ಆ ಲೋಕಾಯುಕ್ತರು ಯಾವುದೋ ಒಂದು ಕಾರಣಕ್ಕೆ ರಾಜೀನಾಮೆ

ಕೊಟ್ಟು ಹೋದರು. ಅವರು ಹೋಗಿ ಆರು ತಿಂಗಳುಗಳಾಗಿದೆ. ನಾವು ಅದರ ಬಗ್ಗೆ ಚರ್ಚೆ ಮಾಡಬೇಕು. ರಾಜ್ಯಪಾಲರ ವಿಷಯ ಬಿಟ್ಟು ಮಾತನಾಡಬೇಕು. ಈ ನಿರ್ಣಯದಲ್ಲಿ ನಾನು ರಾಜ್ಯಪಾಲರ ವಿಷಯ ಹಾಕಿಲ್ಲ. ಇಡೀ ದೇಶದಲ್ಲಿ, ರಾಜ್ಯದಲ್ಲಿ ಭ್ರಷ್ಟಾಚಾರ ತಲೆದೋರಿದೆ. ಉದಾಹರಣೆಗೆ ಹೇಳುವುದಾದರೆ ಪಾರ್ಲಿಮೆಂಟ್‌ನಲ್ಲಿ 15 ದಿವಸಗಳಿಂದ ಅಧಿವೇಶನ ಪ್ರಾರಂಭವಾಗಿದ್ದರೂ ಸಹ ಇವತ್ತಿನವರೆಗೆ ಅಲ್ಲಿ ಸದನದ ಕಲಾಪ ನಡೆಯುವುದಕ್ಕೆ ಅವಕಾಶ ಕೊಟ್ಟಿದ್ದಾರೆಯೇ? ಪಾರ್ಲಿಮೆಂಟ್‌ನಲ್ಲಿ ಭ್ರಷ್ಟಾಚಾರದ ಬಗ್ಗೆ ಚರ್ಚೆ ಆಗಲಿಕ್ಕೆ ಸಾಧ್ಯವಾಗುತ್ತಿಲ್ಲ. ಹಿಂದೆ ರಾಷ್ಟ್ರೀಯ ಪಕ್ಷ ಎನ್.ಡಿ.ಎ. ಸರ್ಕಾರವಿತ್ತು. ಆಗ ಈ ಮಟ್ಟದಲ್ಲಿರಲಿಲ್ಲ. [***] ರಾಷ್ಟ್ರೀಯ ನಾಯಕರು, ಕಳೆದ ಹತ್ತು ಹನ್ನೆರಡು ದಿವಸಗಳಿಂದ ಪಾರ್ಲಿಮೆಂಟ್‌ನಲ್ಲಿ ಇದೇ ವಿಷಯವಾಗಿ ಸದನದ ಕಲಾಪವನ್ನು ನಡೆಯಲಿಕ್ಕೆ ಬಿಡುತ್ತಿಲ್ಲ

ಶ್ರೀ ಅಪ್ಪಚ್ಚು ರಂಜನ್: ರೇವಣ್ಣನವರು [*] ಹೆಸರು ಹೆಳಿದ್ದಾರೆ. ಅವರು ಈ ಸದನದ ಸದಸ್ಯರಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಅವರ ಹೆಸರನ್ನು ತೆಗೆದುಹಾಕಿಬಿಡಿ. ನಾವು ಬೇಡವೆನ್ನುವುದಿಲ್ಲ.

(ಗೊಂದಲ)

ಶ್ರೀ ಅಪ್ಪಚ್ಚು ರಂಜನ್: [*] ಈ ಸದನದ ಸದಸ್ಯರಲ್ಲ. ಈ ಸದನದ ಸದಸ್ಯರಲ್ಲದವರ ಹೆಸರನ್ನು ಪ್ರಸ್ತಾಪಿಸಬೇಕಾದರೆ ನೋಟೀಸ್ ಕೊಟ್ಟು ಅವರ ಬಗ್ಗೆ ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು: [*] ಹೆಸರನ್ನು ಕಡತದಿಂದ ತೆಗೆದುಹಾಕಿದೆ

ಶ್ರೀ ಹೆಚ್. ಡಿ. ರೇವಣ್ಣ: ನಾನು ಅವರ ಬಗ್ಗೆ ಕೆಟ್ಟದ್ದನ್ನೇನು ಮಾತನಾಡಲಿಲ್ಲ.

ಅಧ್ಯಕ್ಷರು: ನೀವು ಈ Adjournment Motion Rule 60 ಯಲ್ಲಿ ಹೇಗೆ ಬರುತ್ತದೆ ಎಂಬುದನ್ನು ಹೇಳುವುದಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಇದು ಬಹಳ ಮುಖ್ಯ. ಈ ರಾಜ್ಯದಲ್ಲಿ ಕಳೆದ ಆರು ತಿಂಗಳುಗಳಿಂದ ಭ್ರಷ್ಟಾಚಾರ ನಡೆಯುತ್ತಿದೆ.

(ಗೊಂದಲ)

ಅಧ್ಯಕ್ಷರು: ನೀವು ಇದರಲ್ಲಿ ಭ್ರಷ್ಟಾಚಾರದ ಬಗ್ಗೆ ಹೇಳಿಲ್ಲ. ನೀವು ಲೋಕಾಯುಕ್ತ

* ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮೇಲಿನ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ನೇಮಕದ ಬಗ್ಗೆ ತಿಳಿಸಿದ್ದೀರಿ ಭ್ರಷ್ಟಾಚಾರದ ವಿಷಯ ಹೇಗೆ ಬರುತ್ತದೆ?

ಶ್ರೀ ಹೆಚ್. ಡಿ. ರೇವಣ್ಣ: ಇವತ್ತು ಈ ವಿಷಯ ನಿಯಮ 60ರ ಅಡಿಯಲ್ಲಿ ಚರ್ಚೆಯಾಗಬೇಕು. ಇವತ್ತೇ ಈ ವಿಷಯ ಮುಗಿಯಬೇಕು. ಈ ಬಗ್ಗೆ ಇವತ್ತೇ ತೀರ್ಮಾನವಾಗಬೇಕೆಂದು ಈ ಸದನದ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದೇನೆ. ಏಕೆಂದರೆ ಲೋಕಾಯುಕ್ತ ನೇಮಕದ ಬಗ್ಗೆ ರಾಜ್ಯಪಾಲರು ಏಕೆ ಪೆಂಡಿಂಗ್ ಇಟ್ಟುಕೊಂಡಿದ್ದಾರೆಂಬ ಬಗ್ಗೆ ನಾನು ಇವತ್ತು ಕೇಳಲಿಲ್ಲ. ನಾವು ಚರ್ಚೆಮಾಡುವಂಥ ಸಂದರ್ಭದಲ್ಲಿ ಸಂವಿಧಾನ, ರಾಜ್ಯಪಾಲರ ಬಗ್ಗೆ ಪ್ರಶ್ನೆ ಮಾಡಲಿಕ್ಕೆ ಹೋಗುವುದಿಲ್ಲ. ದಯಮಾಡಿ ಲೋಕಾಯುಕ್ತರ ನೇಮಕ ಮಾಡದೆ ಆರು ತಿಂಗಳುಗಳಾಗಿವೆ. ಲೋಕಾಯುಕ್ತರ ನೇಮಕ ಏತಕ್ಕೋಸ್ಕರ ಆಗಿಲ್ಲ? ಭ್ರಷ್ಟಾಚಾರದ ವಿರುದ್ಧ ಅಲ್ಲಿ ಏನೂ ಕ್ರಮ ಕೈಗೊಳ್ಳಲಾಗುತ್ತಿಲ್ಲ. ಉದಾಹರೆಣೆಗೆ ಹೇಳುವುದಾದರೆ ಆಡಳಿತ ಪಕ್ಷದವರು ಒಂದು ಕಡೆ statement ಕೊಡುತ್ತಾರೆ, ವಿರೋಧ ಪಕ್ಷದವರು ಒಂದು ಕಡೆ statement ಕೊಡುತ್ತಾರೆ ನೀವು ದಿನಪತ್ರಿಕೆಗಳಲ್ಲಿ ಲೋಕಾಯುಕ್ತ ಬಗ್ಗೆ statement ನೋಡುತ್ತಿದ್ದೀರಿ. ಮಾನ್ಯ ಅಧ್ಯಕ್ಷರೇ ಇವತ್ತೇ ಈ ವಿಷಯವನ್ನು ನಿಯಮ 60 ರಲ್ಲಿ ತೆಗೆದುಕೊಳ್ಳಿ. ಸರ್ಕಾರ ಇದಕ್ಕೆ ಏಕೆ ಹೆದರಬೇಕು? ಇಲ್ಲವಾದಲ್ಲಿ ರಾಜ್ಯದಲ್ಲಿ ಭ್ರಷ್ಟಾಚಾರ ಮಾಡಿಕೊಂಡು ಏನು ಬೇಕಾದರೂ ಮಾಡಿಕೊಂಡು ಹೋಗಲಿ ಎಂದು ಹೇಳಿಬಿಡಿ ನಾವು ಸುಮ್ಮನಿದ್ದುಬಿಡುತ್ತೇವೆ. ನಿಲುವಳಿ ಸೂಚನೆಯನ್ನು ನಾನು ವಾಪಸ್ಸು ತೆಗೆದುಕೊಂಡು ಬಿಡುತ್ತೇನೆ. ಈ ಭ್ರಷ್ಟಾಚಾರಕ್ಕೆ ಅವಕಾಶ ಕೊಡಬೇಕೆಂದು ಸರ್ಕಾರದ ಉದ್ದೇಶವೇ? ಇವತ್ತೇ ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು. ಈ ನಿಲುವಳಿ ಸೂಚನೆಯನ್ನು ನಿಯಮ 60 ರಲ್ಲಿ ತೆಗೆದುಕೊಳ್ಳಬೇಕು, ಏಕೆಂದರೆ ನಿಯಮ 60 ರಲ್ಲಿ ಈ ವಿಷಯ ಚರ್ಚೆಯಾಗಿ ಇವತ್ತೇ ಇದರ ಬಗ್ಗೆ ನಿರ್ಣಯವನ್ನು ಮಾಡಿದರೆ ಸರ್ಕಾರದಿಂದ ರಾಜ್ಯದ ಜನತೆಗೆ ಒಳ್ಳೆಯ ಸಂದೇಶ ಹೋಗುತ್ತದೆ ಎನ್ನುವ ದೃಷ್ಟಿಯಿಂದ ನಾನು ನಿಯಮ 60 ರಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಮಾನ್ಯ ಕಾನೂನು ಸಚಿವರಲ್ಲಿ, ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇವೆ. ಇಲ್ಲವಾದಲ್ಲಿ ಈ ಭ್ರಷ್ಟಾಚಾರಕ್ಕೆ ವಿರೋಧ ಇಲ್ಲವಾದಲ್ಲಿ ನಾವು ಬಿಟ್ಟುಬಿಡುತ್ತೇವೆ. ಅದರ ಜೊತೆಗೆ ಇವತ್ತು ಹೊರಗಡೆ ರಾಜ್ಯಪಾಲರ ಬಗ್ಗೆ ಏಕವಚನದಲ್ಲಿ ಬಯ್ಯುತ್ತಿದ್ದಾರಲ್ಲಾ ಅದನ್ನು ದಯಮಾಡಿ ನಮ್ಮ ರಾಜ್ಯಾಧ್ಯಕ್ಷರು ಸದನದಲ್ಲಿ ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು: ರಾಜ್ಯಪಾಲರ ಬಗ್ಗೆ ಮಾತನಾಡಿರುವ ವಿಷಯವನ್ನು ಕಡತದಿಂದ

ತೆಗೆದುಹಾಕಲಾಗಿದೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ಅದನ್ನೆ ಪ್ರಸ್ತಾಪ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ: ಅವರು ರಾಜ್ಯಪಾಲರ ಬಗ್ಗೆ ಮಾತನಾಡುವುದು ಸರಿಯಲ್ಲ. ದಯಮಾಡಿ ಅವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅವರು ಬಾಯಿಬಿಟ್ಟು ಅದನ್ನು ವಾಪಸ್ಸು ತೆಗೆದುಕೊಂಡಿದ್ದೇನೆ ಎಂದು ಹೇಳಬೇಕು. ಅದರ ಬಗ್ಗೆ ನೀವು ಹೇಳುವ ಬದಲು ಅವರೇ ಬಾಯಿ ಬಿಟ್ಟು ಹೇಳಲಿ.

ಅಧ್ಯಕ್ಷರು: ಈ ಸದನದಲ್ಲಿ ಯಾರೂ ರಾಜ್ಯಪಾಲರ ಬಗ್ಗೆ ಮಾತನಾಡುವುದು ಬೇಡ.

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ . . .

(ಗೊಂದಲ)

ಅಧ್ಯಕ್ಷರು: No, No, No. ಇದೆಲ್ಲಾ ಸರಿಯಿಲ್ಲ. ಈ ರೀತಿ ಮಾತನಾಡಬಾರದು

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಕಾಂಗ್ರೆಸ್ ಪಕ್ಷದ ಸದಸ್ಯರು ಹಾಗೂ ಜೆ.ಡಿ.ಎಸ್. ಪಕ್ಷದ ಸದಸ್ಯರು ಸದನದ ಬಾವಿಗಿಳಿದು ಧರಣಿ ಮಾಡಲಾರಂಭಿಸಿದರು)

(ಗೊಂದಲ)

ಅಧ್ಯಕ್ಷರು: ನನ್ನ ಅನುಮತಿ ತೆಗೆದುಕೊಂಡು ಮಾತನಾಡಿಲ್ಲ. ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಅಧ್ಯಕ್ಷರೇ, ಇಲ್ಲಿ ನನಗೆ ಮಾತನಾಡಲಿಕ್ಕೆ ಒಂದು ನಿಮಿಷ ಅವಕಾಶ ಕೊಡಿ. ಸಂವಿಧಾನಕ್ಕೆ ಅಪಚಾರವಾಗಿದೆ ಎಂಬ ಮಾತನ್ನು ಹೇಳುವುದಕ್ಕೆ ಇಲ್ಲಿ ಅವಕಾಶ ಇಲ್ಲದಿದ್ದರೆ ಹೇಗೆ? ಅಧ್ಯಕ್ಷರೇ, ದಯಮಾಡಿ ಆರ್ಟಿಕಲ್ 213. . .

(ಗೊಂದಲ)

ಅಧ್ಯಕ್ಷರು: ಇದು ಯಾವುದು ಕಡತಕ್ಕೆ ಹೋಗುವುದಿಲ್ಲ

(ಗೊಂದಲ)

ಶ್ರೀ ಡಿ. ಎನ್. ಜೀವರಾಜ್: ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತರ ನೇಮಕ ರಾಜ್ಯಪಾಲರಿಂದ ಆಗುತ್ತಿದೆ ವಿನಃ ಸರ್ಕಾರದಿಂದಲ್ಲ. ಸರ್ಕಾರ ಲೋಕಾಯುಕ್ತರ ಹೆಸರನ್ನು ಈಗಾಗಲೇ ಕಳುಹಿಸಿದೆ. ಹಾಗಾಗಿ ರೇವಣ್ಣನವರ ಆರೋಪದಲ್ಲಿ ಹುರುಳಿಲ್ಲ. ರೇವಣ್ಣನವರು ಸರ್ಕಾರದ ಮೇಲೆ ಏಕೆ ಈ ರೀತಿ ಆರೋಪ ಮಾಡುತ್ತಿದ್ದಾರೋ ಗೊತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಇದು ಯಾವುದೋ ದಾಖಲೆಗೆ ಹೋಗುತ್ತಿಲ್ಲ. ದಾಖಲಿಸಿಕೊಳ್ಳಬಾರದು, ಯಾವುದೂ ದಾಖಲೆಗೆ ಹೋಗುತ್ತಿಲ್ಲ.

(ಈ ಹಂತದಲ್ಲಿ ಧರಣಿ ನಿರತ ಶಾಸಕರು ಘೋಷಣೆ ಕೂಗುತ್ತಿದ್ದರು. ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರ ಅಪ್ಪಣೆಯ ಮೇರೆಗೆ ನಡವಳಿಯನ್ನು ದಾಖಲಿಸಿಕೊಳ್ಳಲಿಲ್ಲ)

ಅಧ್ಯಕ್ಷರು: ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. Please ಹೋಗಿ

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ದಯಮಾಡಿ. ಒಂದು ವಿಚಾರವನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಈಶ್ವರಪ್ಪನವರು ಮಾತನಾಡಬೇಕಾದಾಗ ಬೇರೆ ಬೇರೆ ವಿಚಾರಗಳನ್ನೆಲ್ಲಾ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಅವರಿಗೆ ಸಂವಿಧಾನದ ಅರಿವು ಇದ್ದರೆ ಆ ಮಾತನ್ನು ಆಡುತ್ತಿರಲಿಲ್ಲ . . .

ಶ್ರೀ ಡಿ. ಎನ್. ಜೀವರಾಜ್: ಅವರಿಗೆ ಎಲ್ಲಾ ಅರಿವು ಇದೆ. ಮಾನ್ಯ ಈಶ್ವರಪ್ಪನವರಿಗೆ ತಾವು ಹೇಳಿಕೊಡುವುದು ಬೇಡ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಅಧಿಕಾರ ಏನಿದೆ ಎನ್ನುವುದನ್ನು ದಯಮಾಡಿ ಅರ್ಥ ಮಾಡಿಕೊಳ್ಳಿ.

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಘಂಟೆ 32 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

ಸದನವು ಸಾಯಂಕಾಲ 4 ಘಂಟೆ 07 ನಿಮಿಷಕ್ಕೆ ಸಮಾವೇಶಗೊಂಡಿತು

ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು

(ಕಾಂಗ್ರೆಸ್ ಮತ್ತು ಜೆ.ಡಿ.(ಎಸ್.) ಪಕ್ಷದ ಸದಸ್ಯರು ಸದನದ ಬಾವಿಯಲ್ಲಿದ್ದರು)

ಶ್ರೀ ಹೆಚ್. ಡಿ. ರೇವಣ್ಣ: (ಸ್ಥಾನದಿಂದ) ಸನ್ಮಾನ್ಯ ಸಭಾಧ್ಯಕ್ಷರೆ, ಸುಮಾರು ಎರಡೂವರೆ ಘಂಟೆಗಳ ಕಾಲ ಸದನದ ಸಮಯ waste ಆಗಿದೆ. ದಯಮಾಡಿ, ನೀವು ತೀರ್ಮಾನ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಪಿ. ಎಂ. ನರೇಂದ್ರಸ್ವಾಮಿ (ಮಳವಳ್ಳಿ): ಇದೇ ಸನ್ಮಾನ್ಯ ಬಿಜೆಪಿ ರಾಜ್ಯಾಧ್ಯಕ್ಷರು, ಇವತ್ತು Governor ರವರ ವಿಚಾರದಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಅವರು ಸರ್ವೋಚ್ಚ ನ್ಯಾಯಾಲಯ ಕೊಟ್ಟಿರುವ ತೀರ್ಪನ್ನು ಕೂಡ ಸಮರ್ಥನೆ ಮಾಡಿ ಮಾತನಾಡುತ್ತಾರೆಯೇ? ಸಾಮಾಜಿಕ ನ್ಯಾಯದ ಬಗ್ಗೆ ಅವರಿಗೆ ಕಳಕಳಿ ಇದ್ದರೆ ಇದರ ಬಗ್ಗೆ ಅವರ ನಿಲುವು ಸ್ಪಷ್ಟಪಡಿಸಲಿ. Supreme Court ತಮ್ಮ ನಿರ್ಧಾರಕ್ಕೆ stricture pass ಮಾಡಿದ್ದಾರೆ ಎನ್ನುವುದನ್ನು ಅವರು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದಾರೆಯೇ ಎನ್ನುವುದನ್ನು ನಾನು ಇಲ್ಲಿ ಪ್ರಶ್ನೆ ಮಾಡಲಿಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು: ಈಗ ಬಿ. ಕೆ. ಸಂಗಮೇಶ್ವರರವರದ್ದು, BAC ಯಲ್ಲಿ . . .

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ಥಾನದಿಂದ): House is not in order. ನೀವು ಈ ಸದನದ ಗೌರವವನ್ನು ಎತ್ತಿ ಹಿಡಿಯದೆ ಹೋದರೆ ಆಮೇಲೆ ಯಾರು ಆ ಗೌರವವನ್ನು ಎತ್ತಿ ಹಿಡಿಯುವವರು? ರಾಜ್ಯಪಾಲರ ಗೌರವವನ್ನು ಎತ್ತಿ ಹಿಡಿಯದೇ ಹೋದರೆ ಇನ್ನು ಯಾರು ಎತ್ತಿ ಹಿಡಿಯುತ್ತಾರೆ? ಇದು ಸಂವಿಧಾನದ ಹಕ್ಕು respect ಕೊಡದೇ ಹೋದರೆ ಯಾರು ಕೊಡುವವರು? ಇದನ್ನು ನೀವೇ ಎತ್ತಿಹಿಡಿಯಬೇಕು.

ಶ್ರೀ ಟಿ. ಬಿ. ಜಯಚಂದ್ರ (ತಮ್ಮ ಸ್ಥಾನದಿಂದ): ರಾಜ್ಯಪಾಲರಿಗೆ ಸಂವಿಧಾನದಲ್ಲಿ ಕೊಟ್ಟಿರುವ ಅಧಿಕಾರ ಏನಿದೆ, ಅದನ್ನೇ ಪ್ರಶ್ನೆ ಮಾಡುತ್ತಾ ಕುಳಿತುಕೊಂಡರೆ ಯಾರಿಗೆ ಗೌರವ ಕೊಟ್ಟ ಹಾಗೆ ಆಗುತ್ತದೆ? ಒಂದು ಪಕ್ಷದ ಅಧ್ಯಕ್ಷರಾಗಿರುವಂಥವರು ಈ ರೀತಿಯಾಗಿ

ಮಾಡಿದಾಗ ಸನ್ಮಾನ್ಯ ಅಧ್ಯಕ್ಷರೆ, ಏನಾದರೂ ಕ್ರಮ ತೆಗೆದುಕೊಳ್ಳಲೇಬೇಕು. ಈ ಸಭೆಯ ಘನತೆ ಗೌರವವನ್ನು ಕಾಪಾಡತಕ್ಕಂಥ ಜವಾಬ್ದಾರಿ ನಿಮ್ಮ ಮೇಲಿದೆ.

ಶ್ರೀ ಕೆ. ಎಸ್. ಈಶ್ವರಪ್ಪ: ಇವತ್ತು ಏನು ನಿಯಮ ಕಳುಹಿಸಿದ್ದಾರೆನ್ನುವುದನ್ನು ನಿಮ್ಮ ಗಮನಕ್ಕೆ ತರುತ್ತೇನೆ. ರಾಜ್ಯದಲ್ಲಿ ಲೋಕಾಯುಕ್ತರನ್ನು ನೇಮಕ ಮಾಡುವ ವಿಚಾರದಲ್ಲಿ ಸರ್ಕಾರವು . . .

(ಗೊಂಬಲ)

ಅಧ್ಯಕ್ಷರು: ಯಾವುದೂ ದಾಖಲೆಗೆ ಹೋಗಬಾರದು

(ಗೊಂದಲ)

ಅಧ್ಯಕ್ಷರು: House is not in order

(ಗೊಂದಲ)

ಅಧ್ಯಕ್ಷರು: ಇಲ್ಲ, ಬೇಡ

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ: . . . ರಾಜ್ಯಪಾಲರುನ್ನು . . .

(ಗೊಂದಲ)

ಶ್ರೀ ಸಿದ್ದರಾಮಯ್ಯ: Please do not allow

(ಗೊಂದಲ)

ಅಧ್ಯಕ್ಷರು: ಇಲ್ಲ, ಕೊಡುವುದಿಲ್ಲ

(ಗೊಂದಲ)

ಅಧ್ಯಕ್ಷರು: Please, ರಾಜ್ಯಪಾಲರ ಬಗ್ಗೆ ಮಾತನಾಡುವುದಕ್ಕೆ ಬಿಡುವುದಿಲ್ಲ

(ಗೊಂದಲ)

ಅಧ್ಯಕ್ಷರು: ಯಾವುದೂ ದಾಖಲೆಗೆ ಹೋಗಬಾರದು

(ಗೊಂದಲ)

ಅಧ್ಯಕ್ಷರು: ಇದು ಏಕೋ out of the way ಹೋಗುತ್ತಿದೆ. . . ಯಾರೂ

ಮಾತನಾಡುವುದು ಬೇಡ.

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಗ್ಗೆ 11-00 ಘಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಾಯಂಕಾಲ 4 ಘಂಟೆ 11 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 8ನೇ ಡಿಸೆಂಬರ್ 2011ರ ಗುರುವಾರದಂದು ಬೆಳಗ್ಗೆ 11-00 ಘಂಟೆಗೆ ಸೇರಲು ನಿಶ್ಚಯಿಸಿತು)

ಬೆಳಗಾವಿಯಲ್ಲಿ ಹೊಸದಾಗಿ ಐ.ಟಿ.ಐ/ಪಾಲಿಟೆಕ್ನಿಕ್ ಕಾಲೇಜು

62 (322) ಶ್ರೀ ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ರಾಜ್ಯದಲ್ಲಿ 2008ನೇ ಸಾಲಿನಿಂದ ಹೊಸ ಸರ್ಕಾರಿ ಹಾಗೂ ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಮಂಜೂರಾತಿ ನೀಡಿರುವ ಸಂಖ್ಯೆ ಎಷ್ಟು (ಕ್ಷೇತ್ರವಾರು ಹಾಗೂ ಗ್ರಾಮಗಳವಾರು ವಿವರ ನೀಡುವುದು);

(ಆ) 2012-13 ನೇ ಶೈಕ್ಷಣಿಕ ವರ್ಷದಲ್ಲಿ ಹೊಸದಾಗಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಿಗೆ ಮಂಜೂರಾತಿ ನೀಡುವ ಯೋಜನೆಯನ್ನು ಸರ್ಕಾರವು ರೂಪಿಸಿದೆಯೇ;

(ಇ) ಬೆಳಗಾವಿ ದಕ್ಷಿಣ ಮತಕ್ಷೇತ್ರದ ಮಜಗಾವಿಯಲ್ಲಿ ಹೊಸದಾಗಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ಆರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ: ಇದ್ದಲ್ಲಿ, ಯಾವ ಶೈಕ್ಷಣಿಕ ವರ್ಷದಿಂದ ಮುಂದಿದೆಯೇ: ಇದ್ದಲ್ಲಿ, ಯಾವ ಶೈಕ್ಷಣಿಕ ವರ್ಷದಿಂದ ಆರಂಭಿಸಲಾಗುವುದು;

(ಈ) ಬೆಳಗಾವಿ ದಕ್ಷಿಣ ಮತಕ್ಷೇತ್ರದ ಮಜಗಾವಿಯಲ್ಲಿ ಹೊಸದಾಗಿ ಸರ್ಕಾರಿ ಮಹಿಳಾ ಐ.ಟಿ.ಐ. ಕಾಲೇಜನ್ನು ಆರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ: ಇದ್ದಲ್ಲಿ, ಯಾವ ಶೈಕ್ಷಣಿಕ ವರ್ಷದಿಂದ ಆರಂಭಿಸಲಾಗುವುದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉನ್ನತ ಶಿಕ್ಷಣ ಸಚಿವರು:

(ಅ) ಅನುಬಂಧದಲ್ಲಿ ನೀಡಲಾಗಿದೆ.